ಒ ಎಸ್ 123/2020 ಪಿ.ಡಬ್ಲ್ಯೂ:1

ಇಂದು ದಿ: 13.03.2026 ರಂದು ಸಾಕ್ಷಿಯನ್ನು ಕರೆಯಿಸಲಾಯಿತು. ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲು: 1, 3, 8 ರಿಂದ 10ನೇ ಪ್ರತಿವಾದಿ ಪರ ವಕೀಲರಿಂದ:

ನಾನು 7ನೇ ತರಗತಿ ಓದಿರುತ್ತೇನೆ. ದಾವಾ ಆಸ್ತಿಗಳು ನನ್ನ ತಾತನಿಗೆ ಸೇರಿದ ಆಸ್ತಿಗಳು. ದಾವಾ ಆಸ್ತಿಗಳು ನನ್ನ ತಾತನ ಅಣ್ಣ ತಮ್ಮಂದಿರ ಮಧ್ಯೆ 5 ವಿಭಾಗವಾಗಿ ನಂತರ ನನ್ನ ತಂದೆಗೆ ಬಂದಿರುತ್ತದೆ. ನನ್ನ ತಂದೆ ಭಾಗಕ್ಕೆ 24 ಗುಂಟೆ ಜಮೀನು ಬಂದಿರುತ್ತದೆ. ಆ ಬಗ್ಗೆ ನ್ಯಾಯಾಲಯಕ್ಕೆ ಕ್ರಯಪತ್ರವನ್ನು ಕೊಟ್ಟಿರುತ್ತೇನೆ. ನನ್ನ ತಂದೆ ತಾಯಿಗೆ ನಾನು ಒಬ್ಬಳೇ ಮಗಳು. ನಾನು ಒಬ್ಬಳೇ ಮಗಳು ಎಂದು ಪ್ರಮಾಣ ಪತ್ರದಲ್ಲಿ ಬರೆಸಿದ್ದೇನೆ ಮತ್ತು ಆ ಬಗ್ಗೆ ವಂಶವೃಕ್ಷವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ. ಆ ರೀತಿ ಯಾವುದೇ ದಾಖಲೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ.

ನನ್ನ ತಂದೆಯು 2005ರಲ್ಲಿ ಮೃತರಾದರು. 2005ರಲ್ಲಿ ನನ್ನ ತಂದೆ ಮೃತಪಟ್ಟರು ಎನ್ನುವ ಬಗ್ಗೆ ಮರಣ ಪ್ರಮಾಣ ಪತ್ರವನ್ನು ಹಾಜರುಪಡಿಸಿದ್ದೇನೆ. ನನ್ನ ತಂದೆಗೆ ಬಂತು ಎಂದು ಹೇಳಲಾಗುವ 20 ಗುಂಟೆ ಜಮೀನನ್ನು ಗುಂಟೆ ಲೆಕ್ಕದಲ್ಲಿ ಹಲವಾರು ಮಂದಿಗೆ ಮಾರಾಟ ಮಾಡಿದ್ದಾರೆ ಎಂದರೆ ಸರಿ. ನನ್ನ ಜನ್ಮ ದಿನಾಂಕ ಗೊತ್ತಿಲ್ಲ, ನನಗೆ ಈಗ 50 ವರ್ಷ ಪ್ರಾಯ. ಪ್ರತಿವಾದಿಗಳು ನನ್ನ ಸಂಬಂಧಿಕರಲ್ಲ, ಅವರು ಖರೀದಿದಾರರು. ದಾವೆಯಲ್ಲಿ ತೋರಿಸಿರುವ ಚೆಕ್ಕುಬಂಧಿಯ ವಿವರ ಸರಿಯಿಲ್ಲ ಎಂದರೆ ಸುಳ್ಳು. ಪ್ರತಿವಾದಿಗಳು ಯಾವೆಲ್ಲಾ ಆಸ್ತಿಗಳನ್ನು ಖರೀದಿ ಮಾಡಿದ್ದಾರೆ ಎಂದು ಹೇಳಲಾಗುವುದಿಲ್ಲ. ಐಟಂ 1ರ ಆಸ್ತಿಯಲ್ಲಿ 3 ಗುಂಟೆ ಜಮೀನನ್ನು ಮಾರಾಟ ಮಾಡಿರುತ್ತೇವೆ, ಆದರೆ ಯಾವೆಲ್ಲಾ ಐಟಂ ಆಸ್ತಿಯಲ್ಲಿ ಯಾರು ಖರೀದಿ ಮಾಡಿದ್ದಾರೆ ಎಂದು ಸ್ಪಷ್ಟವಾಗಿ ಹೇಳಲು ಆಗುವುದಿಲ್ಲ. ನನ್ನ ತಂದೆಯಿಂದ ಖರೀದಿ ಮಾಡಿದ ಆಸ್ತಿಗಳನ್ನು ಖರೀದಿದಾರರು 2004ರ ಮೊದಲೇ ಖರೀದಿ ಮಾಡಿದ್ದಾರೆ ಎಂದರೆ ಸರಿ. ಆ ಕಾರಣ ಪ್ರತಿವಾದಿ 1 3, 8 ರಿಂದ 10ರವರು ಖರೀದಿ ಮಾಡಿದ ಆಸ್ತಿಗಳಲ್ಲಿ ನನಗೆ ಹಕ್ಕು ಇಲ್ಲ ಎಂದರೆ ಸರಿಯಲ್ಲ. ತೊಂದರೆ ಕೊಡಲು ಸುಳ್ಳು ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಯಾವೆಲ್ಲಾ ಖರೀದಿದಾರರು ಯಾವೆಲ್ಲಾ ಆಸ್ತಿ ಖರೀದಿ ಮಾಡಿದ್ದಾರೆ ಎಂದು ಸ್ಪಷ್ಟವಾಗಿ ತಿಳಿಯದಿದ್ದರೂ ಸಹ ನಾನು ಸುಳ್ಳು ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ: ಇಲ್ಲ.

ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸ.ಇದೆ.

ಸಹಿ/-

ಹಿರಿಯ ಸಿವಿಲ್ ನ್ಯಾಯಾಧೀಶರು

ಮತ್ತು ಜೆ ಎಂ ಎಫ್ ಸಿ, ನಂಜನಗೂಡು.